



ದೇಶದ ಈಶಾನ್ಯ ರಾಜ್ಯಗಳಲ್ಲಿ ಮನತಣಿಸುವ ಹಲವು ಪ್ರದೇಶಗಳಿವೆ. ಸಿಕ್ಕಿಂ ರಾಜ್ಯ ಪ್ರವಾಸಿಗರಿಗಾಗಿಯೇ ಅನೇಕ ಪ್ರೇಕ್ಷಣೀಯ ಸ್ಥಳಗಳನ್ನು ಅತ್ಯಂತ ವ್ಯವಸ್ಥಿತವಾಗಿ ಅಭಿವೃದ್ಧಿ ಪಡಿಸಿದೆ. ಬೆಟ್ಟ, ಗುಡ್ಡ, ಶಿಖರ, ಕಣಿವೆ, ಕಾಡು, ಜಲಪಾತಗಳಿಂದ ಸಮೃದ್ಧವಾದ ನೈಸರ್ಗಿಕ ಸೊಬಗನ್ನು ಪ್ರವಾಸಿಸ್ನೇಹಿಯಾಗಿಸಿದೆ.

ಸಿಕ್ಕಿಂ ರಾಜಧಾನಿ ಗ್ಯಾಂಗ್‌ಟಕ್‌ನಲ್ಲಿರುವ ಒಂದು ಪುಟ್ಟ ಜಲಪಾತ ಬನ್‌ಝಾಕ್ರಿ ಜಲಪಾತ. ಇದು ನೂರು ಅಡಿ ಎತ್ತರದಿಂದ ಅಂಕುಡೊಂಕಾಗಿ ಧುಮ್ಮಿಕ್ಕುವ ಜಲಧಾರೆ. ರಾಜ್ಯದ ಮುಖ್ಯಮಂತ್ರಿ ಡಾ. ಪವನ್ ಚಾಮ್‌ಲಿಂಗ್ ಈ ಜಲಪಾತ ಸುಂದರಗೊಳಿಸಲು ಜನರ ಅಭಿಪ್ರಾಯಗಳನ್ನು ಸಂಗ್ರಹಿಸಿದರು. ಬಹಳಷ್ಟು ಮಂದಿ ಅಲ್ಲಿಯ ಮೂಲ ನಿವಾಸಿಗಳಾದ ಝಾಕ್ರಿಗಳ ಕಥೆಯ ಆಧಾರದಲ್ಲಿ ಪ್ರವಾಸಿ ಆಕರ್ಷಣೆಗಳನ್ನು ನಿರ್ಮಿಸಲು ಸಲಹೆ ನೀಡಿದರು.

ಈ ಜಲಪಾತದ ಸುತ್ತಮುತ್ತಲ ಕಾಡಿನಲ್ಲಿ ಕೆಲವು ಶಕ್ತಿ ದೇವತೆಗಳಿದ್ದು, ಅವರನ್ನು ವಶಪಡಿಸಿಕೊಂಡ ಶಮಾನಿಕರು ನಂಬಿದ ಭಕ್ತರ ಬೇನೆಯನ್ನು ನಿವಾರಿಸುತ್ತಿದ್ದರು. ಝಾಕ್ರಿ ಮಾಂಗ್‌ಪಾಗಳು ಎಂದರೆ ನೋವು ಶಮನ ಮಾಡುವವರು. ಆದ್ದರಿಂದ ಈ ಜಲಪಾತಕ್ಕೆ ಬನ್(ವನ) ಝಾಕ್ರಿ (ನಿವಾರಕ) ಎಂದು ಹೆಸರಿಟ್ಟರು. ಈ ಕಥೆಯ ಹಿನ್ನೆಲೆಯಲ್ಲಿಯೇ ವನವೊಂದನ್ನು ನಿರ್ಮಿಸಲಾಗಿದೆ. ಶಕ್ತಿ ದೇವತೆ ಇತ್ಯಾದಿ ಶಿಲ್ಪಗಳನ್ನು ನಿರ್ಮಿಸಿ ವೀಕ್ಷಕರಿಗೆ ಸ್ಥಳೀಯ ಜನರ ಆಚರಣೆ, ಜೀವನ ಶೈಲಿಯನ್ನು ತಿಳಿಸುವ ಉದ್ಯಾನವೊಂದನ್ನು ರೂಪಿಸಲಾಗಿದೆ.

ಜಲಪಾತದ ತುತ್ತತುದಿಯವರೆಗೆ ಹೋಗಲು ಸುಂದರ ಮೆಟ್ಟಿಲುಗಳನ್ನು ಹಾಗೂ ಬಿದಿರಿನ ಸೇತುವೆಗಳನ್ನು ನಿರ್ಮಿಸಿದ್ದಾರೆ. ದಾರಿಯಲ್ಲಿ ಅಲ್ಲಲ್ಲಿ ಕೆಲವು ವಿಶ್ರಾಂತಿ ತಾಣಗಳನ್ನು ನಿರ್ಮಿಸಲಾಗಿದೆ. ಈ ಹಾದಿ ಕಾಡಿನೊಳಗೆ ಸಂಚರಿಸುವ ಅನುಭವವನ್ನು ಕೊಡುತ್ತದೆ. ಕಲ್ಲು ಬಂಡೆಗಳ ಸಂದುಗಳಲ್ಲಿ ಗುಡ್ಡಗಾಡು ಜನರ ಶಿಲ್ಪಗಳು, ಹಾವು ಇತ್ಯಾದಿ ಕಾಡುಪ್ರಾಣಿಗಳ ಶಿಲ್ಪಗಳನ್ನು ನಿರ್ಮಿಸಿದ್ದು ಅವು ಬಹಳ ನೈಜವೆಂಬಂತೆ ತಟ್ಟನೆ ಗಾಬರಿಗೊಳಿಸುತ್ತವೆ.

ಬಣ್ಣ ಬಣ್ಣದ ಹೂವಿನ ಗಿಡಗಳು, ಬಳ್ಳಿಗಳು, ಬಿದಿರಿನ ಮೆಳೆಗಳು ಎಲ್ಲವನ್ನೂ ಅಚ್ಚುಕಟ್ಟಾಗಿ ಬೆಳೆಸಿದ್ದಾರೆ. ಇವೆಲ್ಲಕ್ಕಿಂತ ವಿಶೇಷವೆಂದರೆ ಇಲ್ಲಿ ಸೋಲಾರ್ ಪ್ಯಾನಲ್‌ಗಳನ್ನು ಅಳವಡಿಸಿ ಜಲಪಾತ, ತೋಟ ಎಲ್ಲದಕ್ಕೂ ಸೌರ ವಿದ್ಯುತ್ ಬೆಳಕಿನ ವ್ಯವಸ್ಥೆ ಮಾಡಿರುವುದು. ಹಾಗಾಗಿಯೇ ಇದನ್ನು ಬನ್‌ಝಾಕ್ರಿ ಜಲಪಾತ ಮತ್ತು ಶಕ್ತಿ ಉದ್ಯಾನವನ (ಎನರ್ಜಿ ಪಾರ್ಕ್) ಎಂದೂ ಕರೆಯುತ್ತಾರೆ. ಬೆಳಗಿನ 8 ರಿಂದ ರಾತ್ರಿ 8ರ ವರೆಗೆ ತೆರೆದಿರುವ ಈ ಪಾರ್ಕಿನಲ್ಲಿ ದಿನವಿಡೀ ಕಳೆಯಲು ಯಾವುದೇ ಬೇಸರವಾಗುವುದಿಲ್ಲ.